# ಹೀಗೊಂದು ಮಧ್ಯಾಹ್ನ...

– ಕೆ. ಎಸ್. ಶಿವಕುಮಾರ

"ಎಲ್ಲಿದೀರೋ?"

"ಎಲ್ಲಿರೋದೇನು? ಇಲ್ಲಿ ಸಿಕ್ಕ್ಹಾಕಿಕೊಂಡಿದೀವಿ!"

"ಗೊತ್ತಾಯ್ತು ಬಿಡು, ನಾವು ಸಿಗ್ನಲ್‌ನಿಂದ ನೋಡ್ತಾ ಇದ್ವಿ. ಆ ರಸ್ತೆ ಒನ್ ವೇ ಆಗಿದೆ ಕಣ್ರೋ!"

"ಅದು ಈಗ ಗೊತ್ತಾಯ್ತು, ಜೊತೆಗೆ ಒಬ್ಬ ಮಾವನ ದರ್ಶನವೂ ಆಯ್ತು!"

"ಹೌದೇನ್ರೋ? ಇನ್ನೂ ಅಲ್ಲೇ ಇದಾನಾ ಪೋಲಿಸ್ ಮಾವ?"

"ಹೌದು ಮಾರಾಯ. ಈ ಭಾಸ್ಕರನಿಗೆ ಕನ್ನಡ ಬೇರೆ ಬರೋಲ್ವಾ? ಅವನು ಚೆನ್ನಾಗಿ ಉಗಿದು ಉಪ್ಪಿನಕಾಯಿ ಹಾಕ್ತಿದಾನೆ. 'ಎಲ್ಲೆಲ್ಲಿಂದ್ಲೋ ಬಂದು ಬೆಂಗಳೂರ್ನ ಹಾಳ್ಮಾಡ್ತಾ ಇದೀರಾ' ಅಂತೆಲ್ಲ ಜಾಡಿಸ್ತಿದಾನೆ"

"ಸುಮ್ನೇ ಎಷ್ಟು ಕೇಳ್ತಾನೆ ಕೊಟ್ಟು ಬರ್ರೋ!"

"ಎಷ್ಟು ಕೊಡೋದು? ಐನೂರಕ್ಕೆ ಕಡಿಮೆ ಒಪ್ತಾ ಇಲ್ಲ!"

"ಅದು ರಸೀದಿಗೆ ತಾನೇ?"

"ಇಲ್ಲಾ ಲೋ, ರಸೀದಿ ಹರಿಯೋದಾದ್ರೆ ಏಳ್ನೂರಕ್ಕೆ ಕಡಿಮೆ ಹರಿಯಲ್ಲ ಅಂತಿದಾನೆ! ಅಲ್ಲಿ ಅನೂಪ ಇದಾನಾ ಕೊಡು. ಅವರಪ್ಪ ಟ್ರಾಫಿಕ್ಕಲ್ಲೇ ತಾನೇ ಇರೋದು, ಫೋನ್ ಮಾಡಿಸೋಕಾಗುತ್ತಾ ಕೇಳು?"

"...ಅನೂಪ್ ಹಿಯರ್, ಹೇಳೋ ಪಾದ..."

"ಅದೇ ಮಾರಾಯ, ಯಾವ್ನೋ ಪೋಲಿಸ್ ವಕ್ಕರಿಸಿಕೊಂಡಿದಾನೆ, ಏನು ಹೇಳಿದ್ರೂ ಬಿಡ್ತಾ ಇಲ್ಲ. ನಾವೇನಾದ್ರೂ ರೆಸಿಟ್ ಕೊಡಿ ಅಂದ್ರೆ ಉರ್ಕೊಂಡು ಇನ್ನೂ ಏನಾದ್ರೂ ತರ್ಲೆ ತೆಗಿತಾನೆ, ಏಳ್ನೂರಕ್ಕೂ ಬರೆಯೋದಿಲ್ಲ ಆಮೇಲೆ. ನಿನ್ನಪ್ಪನಿಗೆ ಫೋನ್ ಮಾಡಿ ಹೇಳ್ಸೋಕಾಗುತ್ತೇನೋ?"

"...ಓ ಶ್ಯೂರ್, ಆ ಪೋಲಿಸ್‌ಗೆ ಎಷ್ಟು ಸ್ಟಾರ್ಸ್ ಇವೆ ನೋಡಿದ್ಯಾ?..."

"ಹೌದು ಇವನು ಕಾನ್ಸ್ಟೇಬಲ್ ಅಲ್ಲ, ಎರಡು ಸ್ಟಾರ್ ಇದೆ"

"...ನಮ್ ಡ್ಯಾಡ್‌ನ ಲೆವೆಲ್‌ನವನೇ ಇರಬೇಕು, ನಾನು ಅವರಿಗೆ ಫೋನ್ ಮಾಡಿ ಹೇಳ್ತೀನಿ. ಯಾವ ಏರಿಯಾದಲ್ಲಿರ್ತಾರೋ ಗೊತ್ತಿಲ್ಲ. ಬಟ್ ಡೋಂಟ್ ವರಿ, ಇರು ಈ ಫೋನ್‌ನ ಶ್ರೀಶನಿಗೆ ಕೊಡ್ತೀನಿ..."

"ಲೇ ಪಾದ, ಹಾಗಾದ್ರೆ ಅಲ್ಲಿ ಪೋಲಿಸಪ್ಪನ ಮುಂದೆ ಭಾಸ್ಕರನ ಜೊತೆ ಯಾರಿದಾರೋ?"

"ಇದಾನಲ್ಲಪ್ಪಾ, ನಮ್ಮ ಪ್ರತಿವಾದೀ–ಭಯಂಕರ ಸುರೇಶ! ಅವನು ಮಾತಾಡ್ತಾ ಇದ್ರೆ ಒಂದೋ ಆ ಇನ್ಸ್‌ಪೆಕ್ಟರ್ ಬಟ್ಟೆ ಹರಿದುಕೊಂಡು ಓಡಿಬಿಡಬೇಕು ಅಥ್ವಾ ಸಿಟ್ಟಿಗೆದ್ದು ನಮ್ಮನ್ನೆಲ್ಲ ತುಂಬಿಕೊಂಡು ಹೋಗಿ ಚಮ್ಡಾ ಸುಲೀಬೇಕು ಅಷ್ಟೇ!"

"ಹೇ, ಜೋಪಾನ ಮಾರಾಯ! ನೀನೂ ಅಲ್ಲಿಗೆ ಹೋಗೋ. ಸುರೇಶನಿಗೆ ಜಾಸ್ತಿ ಮಾತಾಡೋಕೆ ಬಿಡಬೇಡ. ಆದಷ್ಟು ನಯವಾಗಿ ಮಾತನಾಡಿ ದುಡ್ಡುಕೊಟ್ಟಬಿಟ್ಟು ಬಂದ್ಬಿಡಿ."

"ಸರಿ, ಹೋಗ್ತೀನಿ. ಹಾಗೇ ನನ್ನ ಮೊಬೈಲಿನ ಹ್ಯಾಂಡ್ಸ್–ಫ್ರೀ ಆನ್ ಮಾಡಿಟ್ಟುಕೊಂಡಿರ್ತೀನಿ, ಸುಮ್ನೆ ಕೇಳಿಸ್ಕೊಂಡು ಮಜಾ ತಗೋಳಿ!"

"ಅದನ್ನೇ ಮಾಡಬೇಕು ನಾವು. ಇನ್ನೂ ಹಿಂದಿನ ಸಿಗ್ನಲ್‌ನಲ್ಲೇ ಸಾಯ್ತಾ ಇದೀವಿ. ಈ ಟ್ರಾಫಿಕ್ ಯಾವಾಗ ಸಡಿಲವಾಗುತ್ತೋ ಗೊತ್ತಿಲ್ಲ! ಬಿ ಕೇರ್‌ಫುಲ್, ಅವನಿಗೇನಾದ್ರೂ ಮೊಬೈಲಿನ ಕತೆ ಗೊತ್ತಾದ್ರೆ ಅಷ್ಟೇ!"

"ಇರ್ಲೀ ಗುರೂ, ನಾನು ಫೋನ್ ಒಳಗಡೆ ಇಟ್ಕೊಂಡಿರ್ತೀನಿ. ಜಸ್ಟ್ ಲಿಸನ್ ಟು ದಿಸ್ ಲೈವ್ ಕಾಮೆಂಟರಿ ಅಂಡ್ ಹ್ಯಾವ್ ಫನ್!"

"...ಫೋನ್ ರಿಂಗಾಗ್ತಾ ಇದೆ, ಆದ್ರೆ ನಮ್ಮಪ್ಪ ಫೋನ್ ಎತ್ತುತ್ತಾ ಇಲ್ಲ..."

"ಎಲ್ಲಿದಾರೋ? ಕೀಪ್ ಟ್ರೈಯಿಂಗ್!"

"...ಶ್ಯೂರ್! ಮೊದಲೇ ನಮ್ಮ ಡ್ಯಾಡಿಗೆ ಇದೆಲ್ಲ ಕಂಡ್ರೆ ಆಗೋಲ್ಲ. ಅವರೇನಿದ್ರೂ ಮಾಡಿದ ಅಫೆನ್ಸ್‌ಗೆ ಮೊದಲು ರೆಸಿಟ್ ಹರಿದೇ ಮಾತು ಶುರುಮಾಡೋದು! ದುಡ್ಡು–ಗಿಡ್ಡು, ಲಂಚ ಅಂತೆಲ್ಲ ಮಾತನಾಡಿದ್ರೆ ಮುಗಿದೇ ಹೋಯ್ತು!..."

...

("ಏನ್ರೀ ಮಾತನಾಡ್ತೀರಾ ಅನಂತ್! ಇವ್ರೆಲ್ಲ ಯಾಕ್ರೀ ಬರಬೇಕು ಬೆಂಗಳೂರಿಗೆ? ಒಂದು ಕನ್ನಡ ಪದ ಬರೋಲ್ಲ, ಯಾವ್ಯಾವ ರೋಡ್ ಒನ್‌ವೇ ಆಗಿದೆ ಅಂತಾ ಗೊತ್ತಿಲ್ಲ"

"ನೀವ್ ಬೇಜಾರ್ ಮಾಡ್ಕೋಬೇಡಿ ಸರ್, ಬೆಂಗಳೂರಿನಲ್ಲಿ ದಿನಾ ಒನ್ ವೇಗಳು ಬದಲಾಗ್ತಾ ಇವೆ, ಪಾಪ ಅವನೇನು ಮಾಡ್ತಾನೆ?"

"ಏನ್ ಮಾಡ್ತಾನೆ ಅಂದ್ರೆ? ಕಾರ್ ಇಟ್ಕೊಂಡಿರೋದು ಬರೀ ಝುಮ್ಮಂತ ಓಡಾಡೋಕ್ ಮಾತ್ರಾನಾ? ಸರಿಯಾಗಿ ಟ್ರಾಫಿಕ್ ರೂಲ್ಸುಗಳನ್ನೆಲ್ಲ ನೋಡ್ಕೋತ ಇರಬೇಕು"

"ಆವಾಗ್ಲೇ ಹೇಳಿದ್ವಲ್ಲ ಸಾರ್. ಏನೋ ತಪ್ಪಾಯ್ತು, ಇದೊಂದ್ಸಲ ಬಿಟ್‌ಬಿಡಿ!"

"ಇದೇನ್ರೀ ದೇವಸ್ಥಾನದ ಹುಂಡಿಗೆ ಚಿಲ್ರೆ ಹಾಕ್ತಿದಿರೋ ಹೇಗೆ? ಐನೂರಕ್ಕೆ ಕಡಿಮೆ ಇಲ್ಲಾರೀ!"

"ಏನ್ಸಾರ್ ಹೀಗಂತೀರಾ? ಮಧ್ಯಾಹ್ನದ ಊಟಕ್ಕೋಸ್ಕರ ಆಫೀಸಿನಿಂದ ಹೊರಗೆ ಬಂದಿದೀವಿ, ಊಟ ಮಾಡ್ದೇ ದುಡ್ಡೆಲ್ಲ ನಿಮಗೆ ಕೊಟ್ಟು ಹಸ್ಕೊಂಡು ವಾಪಸ್ ಹೋಗ್ಬೇಕಾಗುತ್ತೆ ಸಾರ್!"

"ನನ್ಗೇ ಆಟ ಹೇಳ್ಕೊಡ್ತೀರೇನ್ರೀ? ಇವ್ರೆಲ್ಲ ಎಲ್ಲೆಲ್ಲಿಂದ ಬಂದು, ಎಷ್ಟೆಷ್ಟು ದುಡೀತಿದಾರೆ, ಹೇಗ್ಹೇಗೆ ಖರ್ಚುಮಾಡ್ತಿದಾರೆ ಅಂತಾ ನನಗೇನು ಗೊತ್ತಿಲ್ಲವೇನ್ರೀ? ಒಂದ್ ರಾತ್ರಿ ನನ್ಜೊತೆ ರೌಂಡ್‌ಗೆ ಬನ್ನಿ ತೋರಿಸ್ತೀನಿ, ರಿಂಗ್ ರೋಡ್ ಆಚೆಗಿರೋ ಕ್ಲಬ್ಬು-ಡಾನ್ಸ್ ಬಾರ್‌ಗಳಲ್ಲೆಲ್ಲ ಈ ನಿಮ್ಮ ಸ್ನೇಹಿತರೇ ತುಂಬಿಕೊಂಡಿರ್ತಾರೆ"

"ಏನೋ ಹೋಗ್ಲಿ ಬಿಡೀ ಸರ್. ಇಷ್ಟು ತಗೋಳ್ಳಿ. ನಿಮ್ಮ ಮಗನೇ ಅಂತಾ ತಿಳ್ಕೊಂಡು ಬಿಟ್ಬಿಡಿ!"

"ನಮ್ಮಗನೂ ಇಂಜಿನಿಯರ್ರೇ ಕಣ್ರೀ. ಅವನಿಗೆ ನಾನಿನ್ನೂ ಕಾರೇ ಕೊಡಿಸಿಲ್ಲ ಗೊತ್ತಾ? ಎಲ್ಲೆಲ್ಲಿಂದ್ಲೋ ಬಂದ್ರು, ದುಡ್ಡು ದುಡಿದ್ರು, ಬೇಕಾದಷ್ಟು ಕೊಟ್ಟು ಕಾರು, ಸೈಟು ತಗಂಡ್ರು, ಬೆಂಗ್ಳೂರ್ ತುಂಬಾ ತುಂಬ್ಕೊಂಡ್ರು! ಈಗ ಟ್ರಾಫಿಕ್ ರೂಲ್ಸ್ ಫಾಲೋ ಮಾಡ್ಲಿಲ್ಲಾಂತ ದಂಡ ಕಟ್ಟಿ ಅಂದ್ರೆ ಇಲ್ಲದ್ದೇ ನಾಟಕ ಆಡ್ತೀರಾ?"

"ಹಾಗಲ್ಲ ಸಾರ್..."

"ಹಾಗೂ ಇಲ್ಲ, ಹೀಗೂ ಇಲ್ಲ, ಸುಮ್ನೇ ಜಾಸ್ತಿ ಮಾತೇಕೆ? ರಿಸಿಟ್ ಹರೀತೀನಿ, ಕೋರ್ಟ್‌ನಲ್ಲಿ ದಂಡ ಕಟ್ಟಿಕೊಳ್ಳಿ ಅಷ್ಟೇ! ಏ ಬಾರಪ್ಪಾ ಇಲ್ಲಿ, ನಿನ್ನ ಲೈಸನ್ಸ್ ಕೊಡಿಲ್ಲಿ..."

"**Pease sir, this will be first and last. Please take this and let us go sir**"

"ಹೇ ಏನ್ ಸುಮ್ನೇ ಬೊಗಳ್ತೀಯ ಮಾರಾಯ. ನಾನೇನು ನನಗೆ ದುಡ್ಡು ಕೊಡೂಂದ್ನೇ? ಸರ್ಕಾರಕ್ಕೇ ಕೊಡು, ಯಾರ್ ಬೇಡಾಂತಾರೆ? ಏ ಅನಂತ್ ನೀವಾದ್ರೂ ಹೇಳ್ರೀ ಇವನಿಗೆ!" ...)

...

"ಈ ಅನಂತ್ ಯಾರು ಮಾರಾಯ?"

"ಯಾರಿಗ್ಗೊತ್ತು?"

"ನನಗ್ಗೊತ್ತು! ಅದು ರಮೇಶನ ಅಲಿಯಾಸ್. ಹೊರಗೆಲ್ಲೂ ಅವನು ನಿಜವಾದ ಹೆಸರು ಹೇಳ್ಕೊಳೋಲ್ಲ!"

"ಹ್ಹ ಹ್ಹ ಹ್ಹಾ...!"

"ಹೇ, ಅನೂಪ, ನಿಮ್ಮಪ್ಪ ಸಿಗಲಿಲ್ಲವೇನೋ?"

"...ಇಲ್ಲ ಮಾರಾಯ, ಅವರ ಫೋನು ಸುಮ್ನೇ ರಿಂಗಾಗ್ತಾ ಇದೆ, ಅವರು ರಿಸೀವ್ ಮಾಡ್ತಾಯಿಲ್ಲ!"

"ಟ್ರೈ ಮಾಡ್ತಾ ಇರು. ಥ್ಯಾಂಕ್‌ಗಾಡ್, ಕೊನೆಗೂ ಟ್ರಾಫಿಕ್ ಕ್ಲಿಯರ್ ಆಯ್ತು!"

"...ಹ್ಹ! ಕೊನೆಗೂ ಅಪ್ಪ ಸಿಕ್ಕರು... '...ಹಲೋ ಡ್ಯಾಡಿ. ನಾವೆಲ್ಲ ಹೊರಗಡೆ ಊಟಕ್ಕೆ ಬಂದಿದೀವಿ... ...ನಾನೂ ನನ್ನ ಆಫೀಸ್ ಕೊಲೀಗ್ಸ್... ...ಯಾವನೋ ಪೋಲಿಸ್ ನನ್ನ ಫ್ರೆಂಡ್‌ನ ಕಾರು ಹಿಡಿದುಬಿಟ್ಟಿದಾನೆ... ...ಇಲ್ಲ, ಎರಡ್ ಕಾರುಗಳಲ್ಲಿ ಬಂದಿದೀವಿ... ...ಐನೂರು ರೂಪಾಯಿ ಕೊಡು ಅಂತಿದಾನೆ!... ...ಏರಿಯಾನಾ?... ...ಇದು ಎಮ್‌ಜಿ ರೋಡ್!...' "

"ಎಂಥಾ ಕರ್ಮ ಮಾರಾಯ, ಊಟಮಾಡೋಕಿದ್ದ ಹುಮ್ಮಸ್ಸೆಲ್ಲ ಹೊರಟೇಹೋಯ್ತು."

"ನಡೀ, ಈಗ ಹೋಟೆಲ್‌ನಲ್ಲಿ ಯಾರು ಜಾಸ್ತಿ ಕತ್ತರಿಸ್ತಾರೆ ನೋಡೋಣ!"

“ಹ್ಹ ಹ್ಹ ಹ್ಹಾ...”
“ಹೋಟೆಲ್ ಬೇಸ್‌ಮೆಂಟ್‌ನಲ್ಲಿ ಪಾರ್ಕಿಂಗ್ ಸಿಕ್ರೆ ಲಕ್ಕೀ!”
“ಸಿಕ್ಕೇ ಸಿಗುತ್ತೆ.. ಇವತ್ತೇನು ಶುಕ್ರವಾರ ಅಲ್ವಲ್ಲ.”
“ಏನ್ ಸೆಖೆ ಮಾರಾಯ! ಮಾರ್ಚ್ ಶುರುವಿನಲ್ಲೇ ಹೀಗಾದ್ರೆ ಇನ್ನು ಬೇಸಿಗೆಗೆ ದೇವ್ರೇಗತಿ!”
“ಸ್ವಲ್ಪ ತೆಪ್ಪಗಿರ್ತೀರಾ ಸರ್? ನಾಲ್ಕುತಿಂಗಳು ಚೆನ್ನೈನಲ್ಲಿದ್ದು ಬನ್ನಿ ಗೊತ್ತಾಗುತ್ತೆ, ಸೆಖೆ–ಬಿಸಿಲು ಅಂದ್ರೆ ಏನು ಅಂತಾ. ಹಾಗೇ ಎಲ್ರೂ ಬೆಂಗಳೂರಿಗೇ ಬರೋಕೆ ಯಾಕಿಷ್ಟಪಡ್ತಾರೆ ಅಂತಾನೂ ಗೊತ್ತಾಗುತ್ತೆ!”
“ಓಹ್! ನಿನ್ನ ಮೊದಲನೇ ಕಂಪ್ನೀ ಟ್ರೈನಿಂಗ್ ಚೆನ್ನೈನಲ್ಲಿತ್ತಲ್ವಾ? ಹಾಗಾದ್ರೆ ಸಕತ್ ಎಕ್ಸ್‌ಪೀರಿಯನ್ಸ್ ಆಗಿದೆ ಬಿಡು!”
“ಹೂಂ ಮತ್ತೆ! ನನಗಂತೂ ಎಲ್ಲೇ ಹೋದ್ರೂ ಬೆಂಗ್ಳೂರ್ ಬಿಟ್ರೆ ಇಲ್ಲ. ಈ ಟ್ರಾಫಿಕ್, ಈ ಧೂಳು, ಪೋಲಿಸು, ರಸ್ತೆ, ಎಲ್ಲವೂ ಹೇಗೇ ಇದ್ರೂ ಇದು ನಮ್ಮದೇ ಸ್ವಂತ ಊರು ಅನಿಸ್‌ಬಿಡುತ್ತೆ!”
**“Getting senti & poetic!,** ಹ್ಹ ಹ್ಹ ಹ್ಹಾ...!”
...

“ಹೇ ಅಲ್ನೋಡ್ರೋ. ಭಾಸ್ಕರನ ಕಾರು!”
“ಓಹ್! ಕಡೆಗೂ ಸಂಧಾನ ಯಶಸ್ವಿಯಾಯ್ತು ಅಂತಾ ಕಾಣ್ಸುತ್ತೆ! ಇಷ್ಟಕ್ಕೇ, ಸುಮ್ನೇ ಅನೂಪನ ಡ್ಯಾಡ್‌ನ ಡಿಸ್ಟರ್ಬ್ ಮಾಡಿದ್ದಾಯ್ತು! ಎಷ್ಟು ದುಡ್ಡು ಹುಂಡಿಗೆ ಹಾಕಿದ್ರೋ ಗೊತ್ತಾಗಲಿಲ್ವಲ್ಲ!”
“ಪಾದ ಆ ಕಾರಲ್ಲೇ ಇದಾನಲ್ಲ, ರಿಂಗ್ ಮಾಡು!”
...
“ಏನೋ ಆಯ್ತು?”
“ಆಗೋದೇನು? ರಮೇಶನ ಮಾತಿನ್ಮುಂದೆ ಯಾರಾದ್ರೂ ಹುಚ್ಚರಾಗ್ದೇ ಉಳಿಯೋದುಂಟೇ? ಇನ್ನೂರಕ್ಕೆ ಕೇಸ್ ಖಲಾಸ್!”
“ಹ್ಹ ಹ್ಹ ಹ್ಹಾ...!”
“ಹ್ಹ ಹ್ಹ ಹ್ಹಾ...!”
“ಹೇ ಅನೂಪ್ ನಿಮ್ಮ ಡ್ಯಾಡ್ ಸಾರಿ ಹೇಳ್ಬಿಡೋ, ಥ್ಯಾಂಕ್ಸ್ ಕೂಡ! ಎಲ್ಲ ಮುಗೀತಲ್ಲ, ಸುಮ್ನೇ ಇನ್ನ್ಯಾಕೆ ಅವರನ್ನು ಇದ್ರೊಳಕ್ಕೆ ಎಳೆಯೋದು?!”
“...ಓಕೇ, ಹಲೋ ಡ್ಯಾಡ್?...”
“ಅದಷ್ಟೇ ಅಲ್ಲ ಶ್ರೀಶ, ಇನ್ನೂರು ರುಪಾಯಿಗೆ ನಮ್ಮಂತ ವಿಐಪಿಗಳಿಗೆ ಒನ್‌ವೇನಲ್ಲಿ ಉಲ್ಟಾ ಬರೋಕೆ ಪೋಲಿಸ್ ಎಸ್ಕಾರ್ಟ್ ಬೇರೆ! ನಮ್ಮ ಮುಂದೇನೇ ಈ ರಸ್ತೆಯ ಕೊನೇ ತನಕಾನೂ ಬರ್ತೀನಿ ಅಂದ.”
“ಮತ್ತೇ? ಅವನೆಲ್ಲಿ ಕಾಣ್ತಾ ಇಲ್ಲ?”
“ನಮಗೂ ಮುಂದೆ ಬಂದು ಅಲ್ಲೇ ನಿಂತಿದಾನೆ ನೋಡು ರಸ್ತೆ ಸೈಡಲ್ಲಿ!”
...

ಇವರ ಕಾರು ಆ ಸರ್ಕಲ್ ತಲುಪುವಷ್ಟರಲ್ಲಿ ಭಾಸ್ಕರನ ಕಾರು ಬಲದ ರಸ್ತೆಯ ಬದಿಗೆ ನಿಂತಿದ್ದು, ಇವರೆದುರಿಗೇ ಮುಖ್ಯರಸ್ತೆಗೆ ತಿರುಗಿಕೊಂಡಿತು. ಪೋಲಿಸ್ ಆ ಕಾರಿನ ಮುಂದೆಯೇ ಬೈಕಿನಲ್ಲಿ ಬಂದಿದ್ದವನು ಫುಟ್‌ಪಾತ್‌ನಲ್ಲಿ ಬೈಕ್ ನಿಲ್ಲಿಸಿ, ತನ್ನ ಮೊಬೈಲ್‌ನಿಂದ ಯಾರೊಂದಿಗೋ ಮಾತನಾಡುತ್ತ ನಿಂತಿದ್ದ. ಮುಂದಿನ ಕಾರಿನಲ್ಲಿದ್ದ ಶ್ರೀಪಾದ (ಪಾದ) ಸುಮ್ಮನಿರಲಾರದೇ, ಕಿಟಕಿಯ ಗಾಜನ್ನಿಳಿಸಿ ಹಿಂದಿದ್ದ ಕಾರಿನವರಿಗೆ ಗೊತ್ತಾಗುವಂತೆ, ತನ್ನ ತೋರುಬೆರಳನ್ನು ಆ ಪೋಲಿಸ್‌ನೆಡೆಗೆ ‘ಈತನೇ’ ಎಂಬಂತೆ ತೋರಿಸಿ, ನಂತರ ತನ್ನ ಮಧ್ಯದ ಬೆರಳನ್ನು ಎತ್ತಿತೋರಿಸಿದ! ಅದೇ ಕ್ಷಣಕ್ಕೆ ಸರಿಯಾಗಿ ಮೊಬೈಲಿನಲ್ಲಿ ಮಾತನಾಡುತ್ತ ರಸ್ತೆಯೆಡೆಗೆ ತಿರುಗಿದ ಆ ಪೋಲಿಸ್ ಪಾದನ ಕೈಸಂಜ್ಞೆಗಳನ್ನು ನೋಡಿದ. ಅವನ ಮುಖ ಸಿಟ್ಟಿನಿಂದ ಗಂಟುಬೀಳುವಷ್ಟರಲ್ಲಿ ಅವನಿಗೆ ಹಿಂದಿನ ಕಾರಿನಲ್ಲಿ ಕುಳಿತಿದ್ದ ಅನೂಪ ಕಂಡ, ಮತ್ತು ಕಾರಿನಲ್ಲಿ ಕುಳಿತು ಮೊಬೈಲಿನಲ್ಲಿ ತನ್ನಪ್ಪನೊಂದಿಗೆ ಮಾತು ಮುಗಿಸುತ್ತಿದ್ದ ಅನೂಪನಿಗೆ ಅವರೇ ಕಂಡರು!
... ... ...